ಕರ್ನಾಟಕ ಸರ್ಕಾರ

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-03**

ಸಂಖ್ಯೆ : ಕೆ4/ಪಿಯು/ಫ್ರೆಂಚ್.ಪ-01/ಆಂ.ಮೌ.ಕು/2023-24 ದಿನಾಂಕ : 02.02.2024

**ಸುತ್ತೋಲೆ**

ವಿಷಯ : 2024ರ ದ್ವಿತೀಯ ಪಿಯುಸಿ ಪರೀಕ್ಷೆ-01ಕ್ಕೆ ಸಂಬಂಧಿಸಿದಂತೆ, ಫ್ರೆಂಚ್ ವಿಷಯದ ಪರೀಕ್ಷೆಗಳಲ್ಲಿ ಅನುಸರಿಸಬೇಕಾದ ಪರೀಕ್ಷಾ ಪದ್ಧತಿ ಹಾಗೂ ಕೈಗೊಳ್ಳಬೇಕಾದ ಕ್ರಮಗಳ ಕುರಿತು.

*****

2024ರ ದ್ವಿತೀಯ ಪಿಯುಸಿ ಪರೀಕ್ಷೆ-01ಕ್ಕೆ ಸಂಬಂಧಿಸಿದಂತೆ, ಫ್ರೆಂಚ್ ವಿಷಯದ ಕುರಿತು, ಈ ಕೆಳಕಂಡ ಸೂಚನೆಗಳ ಪ್ರಕಾರ ಕಡ್ಡಾಯವಾಗಿ ಕ್ರಮ ಕೈಗೊಳ್ಳಲು ಈ ಮೂಲಕ ಸೂಚಿಸಿದೆ.

1. 2024ರ ದ್ವಿತೀಯ ಪಿಯುಸಿ ಪರೀಕ್ಷೆ-01ಕ್ಕೆ **Regular** ವಿದ್ಯಾರ್ಥಿಗಳಿಗೆ **ಫ್ರೆಂಚ್ ವಿಷಯದಲ್ಲಿ ಮೌಖಿಕ ಪರೀಕ್ಷೆಯ ಬದಲು ಆಂತರಿಕ ಮೌಲ್ಯಮಾಪನ 20 ಅಂಕಗಳಿಗೆ ನಡೆಯುತ್ತದೆ** ಹಾಗೂ Regular ವಿದ್ಯಾರ್ಥಿಗಳ ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಸ್ಯಾಟ್ಸ್ ಮುಖಾಂತರ Online ನಲ್ಲಿ ನಮೂದಿಸುವ ಬಗ್ಗೆ, ಸುತ್ತೋಲೆ ಸಂಖ್ಯೆ : ಕಶಾಪಮೌನಿಮಂ:ಮಾಪಮಾ4:ದ್ವಿಪಿಯುಸಿ.ಪ್ರಾ.ಪ-2023-24ರ ಪತ್ರ ದಿನಾಂಕ : 23.12.2023ರ ಕ್ರಮ ಸಂಖ್ಯೆ 32ರಲ್ಲಿ ಈಗಾಗಲೇ ತಿಳಿಸಲಾಗಿರುತ್ತದೆ. ಸದರಿ ಸುತ್ತೋಲೆಯಂತೆ ಕ್ರಮವಹಿಸಲು ಸೂಚಿಸಿದೆ.
2. 2024ರ ದ್ವಿತೀಯ ಪಿಯುಸಿ ಪರೀಕ್ಷೆ-01ಕ್ಕೆ **ಫ್ರೆಂಚ್** ವಿಷಯದಲ್ಲಿ **ನೊಂದಾಯಿಸಿಕೊಂಡಿರುವ** ಪುನರಾವರ್ತಿತ **(Repeaters)** ವಿದ್ಯಾರ್ಥಿಗಳಿಗೆ ಮಾತ್ರ ಈ ಹಿಂದಿನ ವರ್ಷಗಳ ಪರೀಕ್ಷೆಗಳಲ್ಲಿ ನಡೆಸಲಾಗುತ್ತಿದ್ದಂತಹ, ಮೌಖಿಕ ಪರೀಕ್ಷೆಯು ಪ್ರಸ್ತುತ 2024ರ ದ್ವಿತೀಯ ಪಿಯುಸಿ ಪರೀಕ್ಷೆ-01ರಲ್ಲಿ ಇರುವುದಿಲ್ಲ. ಈ ಪುನರಾವರ್ತಿತ ವಿದ್ಯಾರ್ಥಿಗಳಿಗೆ, **2024ರ ದ್ವಿತೀಯ ಪಿಯುಸಿ ಪರೀಕ್ಷೆ-01ರಲ್ಲಿ, 80 ಅಂಕಗಳ ತಾತ್ವಿಕ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳನ್ನು 100 ಅಂಕಗಳಿಗೆ ಪರಿವರ್ತಿಸಿ ಫಲಿತಾಂಶವನ್ನು ಪ್ರಕಟಿಸಲಾಗುವುದು. ಪುನರಾವರ್ತಿತ ವಿದ್ಯಾರ್ಥಿಗಳು ತಾತ್ವಿಕ ಪರೀಕ್ಷೆಯನ್ನು ಮಾತ್ರ ಬರೆಯುವುದು ಎಂಬ ಅಂಶವನ್ನು ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರುಗಳು ಫ್ರೆಂಚ್ ವಿಷಯದ ಪುನರಾವರ್ತಿತ ವಿದ್ಯಾರ್ಥಿಗಳಿಗೆ ತಿಳಿಸಲು ಸೂಚಿಸಿದೆ.** (ಮಾನ್ಯ ಅಧ್ಯಕ್ಷರ ಆದೇಶದಂತೆ)

ಮೇಲ್ಕಂಡ ಎಲ್ಲಾ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವಂತೆ, ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರಿಗೆ ಸೂಚಿಸಿದೆ. ಪರೀಕ್ಷಾ ಕಾರ್ಯಗಳಲ್ಲಿ ಲೋಪದೋಷಗಳು ಕಂಡುಬಂದಲ್ಲಿ ಕಾಲೇಜಿನ ಪ್ರಾಂಶುಪಾಲರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ನಿರ್ದೇಶಕರು(ಪರೀಕ್ಷೆಗಳು)
ಕರ್ನಾಟಕ ಶಾಲಾ ಪರೀಕ್ಷೆ ಮತ್ತು
ಮೌಲ್ಯ ನಿರ್ಣಯ ಮಂಡಲಿ

ಪ್ರತಿಗಳು :

1. ಮಾನ್ಯ ಅಧ್ಯಕ್ಷರು, ಆಪ್ತ ಶಾಖೆ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ - ಸೂಕ್ತ ಮಾಹಿತಿಗಾಗಿ.
2. ಮಾನ್ಯ ನಿರ್ದೇಶಕರು, ಆಪ್ತ ಶಾಖೆ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ - ಸೂಕ್ತ ಮಾಹಿತಿಗಾಗಿ.
3. ಮಾನ್ಯ ಉಪನಿರ್ದೇಶಕರು (ಪಿಯು ಪರೀಕ್ಷಾ ವಿಭಾಗ), ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ - ಸೂಕ್ತ ಮಾಹಿತಿಗಾಗಿ.
4. ಸಂಬಂಧಿಸಿದ ಆಯಾ ಜಿಲ್ಲೆಯ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮುಂದಿನ ಸೂಕ್ತ ಕ್ರಮಕ್ಕಾಗಿ.
5. ಸಂಬಂಧಿಸಿದ ಆಯಾ ಜಿಲ್ಲೆಯ ಕಾಲೇಜುಗಳ ಪ್ರಾಂಶುಪಾಲರುಗಳಿಗೆ- ಮುಂದಿನ ಅಗತ್ಯ ಕ್ರಮಕ್ಕಾಗಿ.
6. ಹಿರಿಯ ಸಹಾಯಕ ನಿರ್ದೇಶಕರು, ಗಣಕ ಶಾಖೆ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ - ಇಲಖಾ ಅಂತರ್ಜಾಲದಲ್ಲಿ ಅಳವಡಿಸಲು ಹಾಗೂ ಸೂಕ್ತ ಮಾಹಿತಿಗಾಗಿ.
7. ಕಛೇರಿ / ಹೆಚ್ಚುವರಿ ಪ್ರತಿ.